# ಗೋ ವಿಶ್ವ

Cow Universe

गौ विश्व

ವಿರೋಧಿ ಸಂವತ್ಸರ ಶ್ರಾವಣ ಜುಲೈ ೨೦೦೯ ಸಂಪುಟ–೩ ಸಂಚಿಕೆ–೭


ಗುರುವಾಣಿ

## ಸಹಜತೆಯ ಸೌಂದರ್ಯ ಕೆಡಿಸುವ ಕೃತಕತೆಯ ಕ್ರೌರ್ಯ



ಪ್ರತಿಯೊಂದು ಜೀವಿಯಲ್ಲೂ, ಸ್ಥಿರ–ಚರಗಳಲ್ಲೂ, ಭಗವಂತನನ್ನು ಕಾಣುವ ಮೂಲಕ ನರ ನಾರಾಯಣನಾಗಿದ್ದಾನೆ ಎಂದರೆ, ಜಗತ್ತು ದೃಷ್ಟಿಸುವುದು ನಮ್ಮ ಹೆಮ್ಮೆಯ ಭರತಭೂಮಿಯ ಕಡೆಗೇ. ಇವೆಲ್ಲಕ್ಕೂ ಕಿರೀಟಪ್ರಾಯವಾಗಿರುವುದು ಆ ವಿಶ್ವಮಾತೆ – ನಮ್ಮ ಗೋಮಾತೆ.

ಇಂದು ಜಗತ್ತಿನ ಎಲ್ಲೆಡೆ ಪರಿಸರದ ಕುರಿತು ಯೋಚನೆ, ಯೋಜನೆ ಅನಿವಾರ್ಯವಾಗಿ ನಡೆದಿದೆ. ಆಧುನಿಕತೆಯ ಅತಿಯಾದ ಬಳಕೆಯಿಂದ ನಮ್ಮ ಸುತ್ತಮುತ್ತಲಿನ ಪರಿಸರದ ಹಸಿರನ್ನು ನಾಶಮಾಡಿ, ಕಾಂಕ್ರೀಟೀಕರಣ ಹೆಚ್ಚು ಮಾಡುತ್ತಿದ್ದೇವೆ. 'ಹಸಿರೇ ಉಸಿರು' ಆಗಿದ್ದ ಜಗತ್ತು ಇಂದು ಅಧೋಗತಿಯೆಡೆಗೆ ಸಾಗಿದ. ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೇ, ಮಾನವನಿಗೆ ಸರ್ವೋಪಯೋಗಿಯಾಗಿರುವ ಗೋವಿನಂತಹಾ ಅನೇಕ ಮುಗ್ಧ ಮೂಕ ಜೀವಿಗಳಿಂದು ಅಳಿವಿನಂಚಿಗೆ ತಲುಪಿವೆ.

ನಮ್ಮಲ್ಲಿ ಅನೇಕರು ನಾನು ಶತಪ್ರತಿಶತ ಸಸ್ಯಾಹಾರಿ – ಪ್ರತ್ಯಕ್ಷವಾಗಲೀ ಪರೋಕ್ಷವಾಗಿಯಾಗಲೀ ಮಾಂಸಾಹಾರ ಸೇವನೆ ಮಾಡುವುದೇ ಇಲ್ಲ, ಅದು ಪರಮ ಪಾಪ ಎನ್ನುವವರಿದ್ದಾರೆ. ಇಂದಿನ ಈ 'ರೆಡಿಮೇಡ್' ಸಂಸ್ಕೃತಿಯಲ್ಲಿ ಸಿದ್ಧ ಆಹಾರದ ಪೊಟ್ಟಣ, ಅಲಂಕಾರಿಕ ಸಾಧನಗಳು ಇತ್ಯಾದಿಗಳನ್ನು ಬಳಸಿ, ನಮ್ಮ ದೈನಂದಿನ ಜೀವನವನ್ನು ಸುಲಭವಾಗಿಸಿಕೊಂಡ ನಾವು, ನಿಜವಾಗಿಯೂ ಸಸ್ಯಾಹಾರಿಗಳೇ? ಮನದಾಳದವರೆಗೂ ನಾವು 100% ಸಸ್ಯಾಹಾರಿಗಳೇ!

ಈ ರೀತಿ ವಿಷಯಗಳ ಕುರಿತು ಚಿಂತನೆ ಮಾಡಬೇಕಾದ ಅನಿವಾರ್ಯತೆ ಬಂದೊದಗಿದೆ. ನಾವಿಂದು ಸಿದ್ಧ ಆಹಾರ ಪದಾರ್ಥಗಳ ತಯಾರಿಕೆಗಾಗಿ ಗೊತ್ತಿದ್ದೋ, ಗೊತ್ತಿಲ್ಲದೆಯೋ ಗೋ ಹತ್ಯೆ ಮಾಡುತ್ತಿದ್ದೇವೆ. ಉದಾಹರಣೆಗಾಗಿ ಅನೇಕ ಸಿಹಿತಿಂಡಿಗಳ, ಕೆಲವು ರೀತಿಯ ಪಾನ್‌ಬೀಡಾಗಳ ಮೇಲೆ ಹಚ್ಚುವ 'ವರಕ್' (ಬೆಳ್ಳಿಹಾಳೆ) ತಯಾರಿಕೆಯ ಕಡೆ ನೋಡಿದಾಗ...

ಕಸಾಯಿಖಾನೆಗಳಲ್ಲಿ ಎತ್ತಿನ / ಹಸುವಿನ ಹತ್ಯೆಯಾದ 'ತಕ್ಷಣ' ಅವುಗಳ ಕರುಳನ್ನು ವರಕ್ ತಯಾರಕರಿಗೆ ಕಳುಹಿಸಿಕೊಡಲಾಗುತ್ತದೆ. ಅಲ್ಲಿ ಅದರಿಂದ ರಕ್ತ ಮತ್ತು ಕರುಳಿನ ತ್ಯಾಜ್ಯವನ್ನು ಪ್ರತ್ಯೇಕಿಸಿ, ಅದನ್ನು ಕತ್ತರಿಸಿ, ಬಿಡಿಸಿ ಒಂದರ ಮೇಲೊಂದರಂತೆ ಇಡಲಾಗುತ್ತದೆ. ಅವುಗಳ ಮಧ್ಯೆ ದಪ್ಪಗಿನ ಬೆಳ್ಳಿ ಹಾಳೆಯನ್ನಿಟ್ಟು, ಮೇಲ್ಬದಿಯ ಕರುಳಿನ ಮೇಲೆ ಸುತ್ತಿಗೆಯಿಂದ ಹೊಡೆಯಲಾಗುತ್ತದೆ. ಈ ರೀತಿ ಕೆಲವಾರು ಹೊತ್ತು ನಿರಂತರವಾದ ಹೊಡೆತದಿಂದ ಆ ಬೆಳ್ಳಿ ಹಾಳೆ ತೆಳುವಾಗುತ್ತದೆ. ನಂತರ ಈ ಅತಿ ತೆಳು ವರಕ್‌ನ್ನು ಕಾಗದದ ಹಾಳೆಗಳ / ಚರ್ಮದ ಹಾಳೆಗಳ ನಡುವೆ ಇಟ್ಟು ಸಿಹಿ ತಯಾರಿಕೆಯ ಸ್ಥಳಗಳಿಗೆ ಕಳುಹಿಸಲಾಗುತ್ತದೆ. ಅನೇಕ ಕಡೆಗಳಲ್ಲಿ ಈ ವರಕ್‌ನ್ನು ಸೂಕ್ಷ್ಮದರ್ಶಕದ ಕೆಳಗಿಟ್ಟು ನೋಡಿದಾಗ ರಕ್ತದ ಕಣಗಳು ಹಾಗೂ ಕರುಳಿನ ತ್ಯಾಜ್ಯ ಕಣಗಳು ಕಂಡದ್ದಿದೆ.

ಸಾಮಾನ್ಯವಾಗಿ 1 ಕಿಲೋ (ಬೇಕರಿ) ಸಿಹಿತಿಂಡಿಯ ತಯಾರಿಗೆ 4 ವರಕ್ ಬಳಸುತ್ತಾರೆ. ಇಲ್ಲೊಂದು ಅಂಶವನ್ನು ಗಮನಿಸಬೇಕು. ನಮ್ಮಲ್ಲಿಯು

### ಹೂರಣ


ಗುರುವಾಣಿ
ಪ್ರಶ್ನೋತ್ತರ
ಮಾಸದ ಗೋವು: ಗೌಳವ್
ಯಾತ್ರೆಯ ನಂತರ ನಮ್ಮ ದಾರಿ, ಪಾತ್ರ, ಪ್ರಯತ್ನ
ಹೀಗೊಂದು ಹಾಲಿನ ಸ್ವಗತ–2
ಅಂದದಾಕಳ ಕಂದ ಕರುಗಳ ಮಂದೆ ಮಂದೆಯಲಿ...



ಪ್ರಕಾಶನ: IT4COW ಸಂಘಟನೆ
groups.yahoo.com/group/IT4COW
ಅಂತರಜಾಲ ತಾಣ: vishwagou.org
ಸಂಪರ್ಕ: govishva@gmail.com




ಮಧ್ಯಮವರ್ಗವೊಂದರ ಮನೆಯವರು ವರ್ಷಕ್ಕೆ ಸರಾಸರಿ 100 ಕಿಲೋ ಈ ಸಿಹಿತಿಂಡಿಗಳನ್ನು ಬಳಸುತ್ತಾರೆ. ಹಾಗಾದರೆ ಒಟ್ಟಾರೆ ಜೀವಮಾನದಲ್ಲಿ ಸಿಹಿತಿಂಡಿಯ ಒಟ್ಟಿಗೆ ವರಕ್‌ನ ಸೇವನೆ ಎಷ್ಟಿರಬಹುದು! ತನ್ಮೂಲಕ ಶತಪ್ರತಿಶತ ಸಸ್ಯಾಹಾರಿ ಆದವನೊಬ್ಬ ಎಷ್ಟು ಗೋಹತ್ಯೆಯ ಹಿಂದೆ ನಿಂತಂತಾಗುತ್ತದೆ?

ಒಂದು ಮಾಹಿತಿಯ ಪ್ರಕಾರ ಭಾರತದಲ್ಲಿ ಪ್ರತಿವರ್ಷ 275 ಟನ್ ಬೆಳ್ಳಿ ವರಕ್ ಆಗಿ ಪರಿವರ್ತಿತವಾಗುತ್ತದೆ. ಇಷ್ಟು ಪ್ರಮಾಣದ ವರಕ್ ತಯಾರಿಕೆಗೆ 5,16,000 ಆಕಳು / ಎತ್ತುಗಳ ಕರುಳನ್ನು ಬಳಸಲಾಗುತ್ತದೆ.

ಇದೊಂದು ಸಣ್ಣ ಉದಾಹರಣೆ ಅಷ್ಟೇ. ಏಕೆಂದರೆ ನಾವಿಂದು ಜೀವನದ ಎಲ್ಲ ಹಂತಗಳಲ್ಲಿಯೂ ಬಳಸುತ್ತಿರುವ ರಾಸಾಯನೀಕೃತ ವಸ್ತುಗಳ ಹಿನ್ನೆಲೆ ಕೆದಕಿದರೆ ಇನ್ನು ಏನೇನಿದೆಯೋ!? ಆ ದೇವನೇ ಬಲ್ಲ.

ಇದಕ್ಕೆಲ್ಲಾ ಎದ್ದು ಕಾಣುವ ಪರಿಹಾರ ಒಂದೇ...

ಕೃತಕತೆಯ ಹಿಂದೆ ಹೋಗುವುದನ್ನು ಬಿಟ್ಟು ಸಹಜತೆಯ ಜೀವನ ಸಾಗಿಸುವಲ್ಲಿ ತೊಡಗಬೇಕಿದೆ. 'ಗ್ರಾಮ ರಾಜ್ಯದಿಂದ ರಾಮ ರಾಜ್ಯವಾಗಬೇಕಾದರೆ', ಗೋಹತ್ಯೆಯಂತಹಾ ದುಷ್ಕೃತ್ಯಗಳನ್ನು ನಿಲ್ಲಿಸಬೇಕಿದೆ. ಕುಟ್ಟಿ ಪುಡಿಮಾಡಿದ 'ಹಸಿರೇ ಉಸಿರು' ಎನ್ನುವ ಗ್ರಾಮಗಳನ್ನು ಕಟ್ಟಿ ಬೆಳೆಸಬೇಕಿದೆ.

ನಮ್ಮ ಹುಟ್ಟಿನಿಂದ ಜೀವಿತದ ಅಂತಿಮ ಕ್ಷಣದವರೆಗೂ ಒಂದಲ್ಲ ಒಂದು ರೀತಿಯಲ್ಲಿ ಮಾತೃ ಪ್ರೇಮ ಉಣಬಡಿಸುತ್ತಿರುವ ಪವಿತ್ರ ಗೋಮಾತೆಯನ್ನು ಉಳಿಸಿ, ಬೆಳೆಸೋಣ. ಕೃತಕತೆಯ ಕ್ರೌರ್ಯವನ್ನು ಸಹಜತೆಯ ಸೌಂದರ್ಯದಲ್ಲಿ ಲೀನವಾಗಿಸೋಣ.

॥ ವಂದೇ ಗೋ ಮಾತರಮ್ ॥

ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಗೋಕರ್ಣ ಮಂಡಲಾಧೀಶ

**ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**

ಶ್ರೀರಾಮಚಂದ್ರಾಪುರಮಠ

# ಪ್ರಶ್ನೋತ್ತರ

ಪ್ರ: ಗೋಮಾಂಸ ಭಕ್ಷಣೆ ದುಬಾರಿ ಎನ್ನುತ್ತಾರೆ ನಿಜವೇ ?

ಉ: ಪರಿಸರ ಹಾಗೂ ಭೂ ಸಂಪನ್ಮೂಲದ ಬಳಕೆಯ ದೃಷ್ಟಿಯಿಂದ ಗೋಮಾಂಸ ಭಕ್ಷಣೆ ನಿಜಕ್ಕೂ ದುಬಾರಿಯೇ. ಅಮೆರಿಕದಲ್ಲಿ 90% ರಷ್ಟು ಜನ ಗೋಮಾಂಸ ಭಕ್ಷಕರು. ಅಲ್ಲಿ ನಡೆಸಿದ ಒಂದು ಅಧ್ಯಯನದ ಪ್ರಕಾರ ಪೌಂಡು ಗೋಮಾಂಸ ಉತ್ಪಾದಿಸಲು 16 ಪೌಂಡು ಧಾನ್ಯ ಬೇಕು. ಒಬ್ಬ ಗೋಮಾಂಸ ಭಕ್ಷಕನಿಗೆ ಅಗತ್ಯವಾದಷ್ಟು ಭೂಮಿಯಲ್ಲಿ 20 ಜನ ಸಸ್ಯಾಹಾರಿಗಳನ್ನು ಪೋಷಿಸಬಹುದು. ಅಮೆರಿಕದಲ್ಲಿ ಗೋಮಾಂಸ ಉತ್ಪಾದನೆಗಾಗಿಯೇ 56% ರಷ್ಟು ಕೃಷಿ ಭೂಮಿ ಬಳಕೆಯಾಗುತ್ತದೆ. ಅಷ್ಟು ಭೂಮಿಯಲ್ಲಿ 130 ಕೋಟಿ ಸಸ್ಯಾಹಾರಿಗಳಿಗೆ ಸಾಕಾಗುವಷ್ಟು ಧಾನ್ಯ ಬೆಳೆಯಬಹುದು. (ಅಮೆರಿಕದ ಜನಸಂಖ್ಯೆ 30 ಕೋಟಿ)

ಪ್ರ: ಗೋಧಿಗಿಂತ ಗೋಮಾಂಸ ಹೆಚ್ಚು ಪುಷ್ಟಿದಾಯಕವೇ ?

ಉ: ಒಂದು ಪೌಂಡು ಗೋಧಿ ಬೆಳೆಯಲು 25 ಗ್ಯಾಲನ್ ನೀರು ಬೇಕು. 1 ಪೌಂಡು ಗೋಮಾಂಸ ಉತ್ಪಾದಿಸಲು 2500 ಗ್ಯಾಲನ್ ನೀರು ಬೇಕು. ಅಮೆರಿಕದಲ್ಲಿ ಬೆಳೆಯುವ ಧಾನ್ಯದಲ್ಲಿ ಶೇ 90 ಭಾಗ ಪಶು ಆಹಾರವಾಗಿ ಬಳಕೆಯಾಗುತ್ತದೆ. ಆ ಗೋವುಗಳನ್ನು ನಂತರ ಮನುಷ್ಯರು ತಿನ್ನುತ್ತಾರೆ. ಧಾನ್ಯವನ್ನು ಮಾಂಸವಾಗಿ ಪರಿವರ್ತಿಸುವ ಈ ಪ್ರಕ್ರಿಯೆಯಲ್ಲಿ ಶೇ 90 ಪ್ರೋಟೀನು, ಶೇ 90 ಕಾರ್ಬೋಹೈಡ್ರೇಟ್ ಶೇ 100 ನಾರಿನ ಅಂಶಗಳು ನಷ್ಟವಾಗುತ್ತದೆ.

– **ಪ್ರೊ. ಬಿ. ಎಂ. ಕುಮಾರಸ್ವಾಮಿ** (ಕೃಪೆ: ವಿಜಯ ಕರ್ನಾಟಕ) (ಸಂಗ್ರಹ: ಉಲ್ಲಾಸ್ ಸಿ. ಕೆ)

ಮಾಸದ ಗೋವು

# ಗೌಳವ್

ಉದ್ದೇಶ: ಉಭಯೋದ್ದೇಶಿತ ತಳಿ. ಕೆಲಸಗಾರ ತಳಿಯಾಗಿಯೇ ಹೆಚ್ಚಿನ ಉಪಯೋಗ.

ಪ್ರಸಿದ್ಧಿ: ಅತ್ಯಂತ ಚುರುಕಿನ ಹಳೆಯ ಕೆಲಸಗಾರ ತಳಿ.

ಮೂಲ: ಮಹರಾಷ್ಟ್ರದ ವಾರ್ಧ, ಬಾಲಾಘಾಟ್, ಛಿಂದ್ವಾರಾ, ರಾಜ್‌ನಂದ್ಗಾಂವ್ (ಈಗ ಚತ್ತೀಸ್‌ಗಢದಲ್ಲಿದೆ) ಸುತ್ತಮುತ್ತಲ ಪ್ರದೇಶಗಳು.

ವ್ಯಾಪ್ತಿ: ವಿಶೇಷವೆಂದರೆ ಆರ್ಯರು ಹಾದುಹೋದರೆನ್ನಲಾದ ಉತ್ತರದಿಂದ ಮಧ್ಯಭಾರತದಗುಂಟ ದಕ್ಷಿಣದವರೆಗಿನ ಹಾದಿಯಗುಂಟ ಇವುಗಳನ್ನು ಕಾಣಬಹುದು.



**ಗೌಳವ್, ಮಹಾರಾಷ್ಟ್ರ**

ಇತಿಹಾಸ: ಮರಾಠರು ಈ ತಳಿಯ ಮುಖ್ಯ ಪೋಷಕರು. ಈ ತಳಿಯ ಚಲನೆಯಲ್ಲಿನ ಅಪರೂಪದ ವೇಗಕ್ಕೆ ಮರಾಠರು ಮರುಳಾಗಿ ಯುದ್ಧಸಾಮಗ್ರಿಗಳ ಸಾಗಣೆಗೆ ಬಳಸಿಕೊಂಡರೆಂಬ ಪ್ರತೀತಿ. ಮಧ್ಯಪ್ರದೇಶದ ಗೋಂಡ್ವಾನ ಪ್ರಾಂತ್ಯದ ಮೇಲೆ ಯುದ್ಧವಾದಾಗ ಬೆಟ್ಟಗುಡ್ಡಗಳ ದಾರಿಯಲ್ಲಿ ಯುದ್ಧ ಸಾಮಗ್ರಿಗಳ ಸಾಗಣೆ ದುಸ್ತರವಾದ ಸಂದರ್ಭದಲ್ಲಿ ಗೌಳವ್ ತಳಿ ಯುದ್ಧ ಗೆಲ್ಲುವಲ್ಲಿ ಪ್ರಮುಖ ಪಾತ್ರವಹಿಸಿತೆಂದು ಐತಿಹ್ಯ. ಒಂದು ಕಾಲದಲ್ಲಿ ಅತ್ಯುತ್ತಮ ಹಾಲಿನ ತಳಿ ಕೂಡ ಇದಾಗಿತ್ತೆಂದು ಇತಿಹಾಸ ಹೇಳುತ್ತಾದರೂ ಕಳೆದೆರೆಡು ಶತಮಾನಗಳಲ್ಲಿ ಇದರ ವೇಗ ಮತ್ತು ದೇಹದಾರ್ಢ್ಯತೆಯ ಕುರಿತಾಗಿ ತಳಿಪೋಷಕರು ಹೆಚ್ಚಿನ ಆಸಕ್ತಿವಹಿಸಿದ್ದರಿಂದ ಇದೊಂದು ಉತ್ತಮ ಕೆಲಸಗಾರತಳಿಯಾಗಿಯೆ ರೂಪುಗೊಂಡಿತು.

ಸಾಕುವಿಕೆ: ಸಾಮನ್ಯವಾಗಿ 6 ರಿಂದ 8 ಹಸುಗಳಿರುವ ಮಂದೆಯಲ್ಲಿ. ಇದನ್ನು ಸಾಕಲ್ಪಡುವ ಪ್ರದೇಶಗಳಲ್ಲಿನ ಮುಖ್ಯ ಬೆಳೆ ಜೋಳವಾದ್ದರಿಂದ ಇವುಗಳ ಆಹಾರ ಕಟಾವ್ ಆದ ಜೋಳದ ಗಿಡ. ಸೋಯಾ ಬೀನ್‌ನ ಗಿಡ ಮತ್ತು ಹಿಂಡಿ ಕೂಡ ತುಂಬ ಪ್ರಚಲಿತವಿರುವ ಇನ್ನೊಂದು ಆಹಾರ.

ದೇಹಲಕ್ಷಣಗಳು: ಚಪ್ಪಟೆ ಹಣೆ, ಬಾದಾಮಿ ಆಕಾರದ ಕಣ್ಣುಗಳು, ಮೇಲೆ ಚಾಚಿದಂತ ಮಧ್ಯಮ ಗಾತ್ರದ ಕಿವಿ, ಹಿಂದಕ್ಕೆ ಬಾಗಿದ ದಪ್ಪನೆಯ ಆದರೆ ಗಿಡ್ಡ ಕೊಂಬು, ಮೊಣಕಾಲು ಮುಟ್ಟಿಯೂ ಮುಟ್ಟದಂತಿರುವ ಗಿಡ್ಡ ಬಾಲ.

**ಮೂಲ: ವಾರ್ಧಾ ಜಿಲ್ಲೆ – ಮಹಾರಾಷ್ಟ್ರ, ದಕ್ಷಿಣ ಮಧ್ಯ ಪ್ರದೇಶ.**
**ವಿಭಾಗ: ಉಭಯ. ೧೮ನೇ ಶತಮಾನದಲ್ಲಿ ಮರಾಠರು ಯುದ್ಧ ಸಾಮಗ್ರಿ ಸಾಗಣೆಗಾಗಿ ಈ ತಳಿಯನ್ನು ಅಭಿವೃದ್ಧಿಪಡಿಸಿದ್ದರು.**
**ಸಾಧಾರಣ ಗಾತ್ರದವು.**
**ಗಂಡು: ಕುತ್ತಿಗೆ, ಭುಜ, ಹಿಂಭಾಗದಲ್ಲಿ ಹೆಚ್ಚು ಬೂದು ಇರುತ್ತದೆ.**
**ಮುಖ: ಉಬ್ಬಿರುತ್ತದೆ.**
**ಕಣ್ಣು: ನೀಳವಾಗಿದ್ದು, ಬಾಗಿರುತ್ತದೆ.**
**ಕೊಂಬು: ಸಣ್ಣದು**
**ಕಿವಿ: ಸಾಧಾರಣ ಗಾತ್ರ**
**ಬಾಲ: ಸಣ್ಣದು**

ಗೌಳವ್ ತಳಿಯ ಗೋವುಗಳು ಹೆಚ್ಚಾಗಿ ಕಾಣಸಿಗುವುದು ಬಿಳಿ ಹಾಗು ಬೂದು ಬಣ್ಣಗಳಲ್ಲಿ. ಹೋರಿಗಳು ಕಪ್ಪು ಬಣ್ಣದ ಕಂಠ, ದೊಡ್ಡ ಡುಬ್ಬ ಹೊಂದಿದ್ದು ಹೆಚ್ಚು ಉದ್ದವಾಗಿ ಬಲಾಢ್ಯವಾಗಿರುತ್ತವೆ.

ಗೌಳವ್ ತಳಿಯ ಹಾಲು ಉತ್ಪಾದಕತೆ ಒಂದು ಅವಧಿಗೆ ಸುಮಾರು 600 ಕೆ.ಜಿ. ಹೋರಿಗಳ ಸಾಮನ್ಯವಾಗಿ 120 ಸೆ.ಮೀ ಉದ್ದವಾಗಿದ್ದರೆ ಹಸುಗಳ ಉದ್ದ 110 ಸೆ.ಮೀ. ಹೋರಿಗಳ ಎತ್ತರ ಅಜಮಾಸು 450 ಕೆ.ಜಿ. ಹಸುಗಳದ್ದು 340 ಕೆ.ಜಿ.ಯ ಆಚೀಚೆ.

**–ಮಧುಕೇಶ ದೊಡ್ಡೇರಿ**



ವಿಶ್ವ ಮಂಗಲ ಗೋ ಗ್ರಾಮ ಯಾತ್ರೆ

# ಯಾತ್ರೆಯ ನಂತರ ನಮ್ಮ ದಾರಿ, ಪಾತ್ರ, ಪ್ರಯತ್ನ

**ನಮ್ಮ ದಾರಿ:** ಯಾತ್ರೆ ಸಮಾಜ ಕಲ್ಯಾಣದ ಆರಂಭ ಅಷ್ಟೇ. ನಂತರದ ಸರದಿ ರಚನಾತ್ಮಕ ಕಾರ್ಯದ್ದು. ಹಲವು ಸವಾಲುಗಳಿವೆ. ಗೋವು ನಮಗೆ ದೇವೀ ಸ್ವರೂಪದಲ್ಲಿದೆ. ಹೌದು, ಅನುಮಾನವೇ ಇಲ್ಲ. ಆದರೆ, ಇಂದಿನ ವ್ಯಾವಹಾರಿಕ ಸನ್ನಿವೇಶದಲ್ಲಿ ಲಾಭವೇ ಎಲ್ಲದಕ್ಕೂ ಮಾನದಂಡವಾಗುತ್ತಿದೆ. ಲಾಭ ಆಗದ ಹೊರತು ಮುಂದಿನ ಮಾತಿಗೆ ಆಸ್ಪದವೇ ಇಲ್ಲ. ಆದ್ದರಿಂದ ಗೋವಿನಿಂದಾಗುವ ಹಣಕಾಸಿನ ಚಿಂತನೆಗೇ ಆದ್ಯತೆ ಕೊಟ್ಟು ಕೆಲಸ ಮಾಡುವುದು ಅನಿವಾರ್ಯವಾಗಿದೆ. ಅದಕ್ಕಾಗಿ ಗವ್ಯೋದ್ಯಮವನ್ನು ವ್ಯಾಪಕಗೊಳಿಸಿ, ಗೋಪಾಲನೆಯನ್ನು ಲಾಭಕರ ಮಾಡಿ, ಗೋ ಸಂರಕ್ಷಣೆ ಮಾಡುವ ವಿಶಿಷ್ಟ ಕಾರ್ಯ ಯೋಜನೆ ಸಿದ್ಧವಾಗುತ್ತಲಿದೆ.

**ನಮ್ಮ ಪಾತ್ರ :** ನಮ್ಮದು ಅಚ್ಚ ದಲ್ಲಾಳಿಯ ಪಾತ್ರ. ಅಂದರೆ ಗೋವಿನ ಪ್ರಯೋಜನವನ್ನು ಒಬ್ಬ ಶ್ರೀಸಾಮಾನ್ಯನಿಗೂ ಮನದಟ್ಟು ಮಾಡಿಸಿ, ಪ್ರತಿಯೊಬ್ಬರ ಮನೆಯಿಂದ ಗೋಪಾಲನೆಯ ಅಲೆ ಮೇಲೇಳುವಂತೆ ಮಾಡುವುದು. ಕೆಲವೇ ಕೆಲವು ಮಂದಿ ಕೋಟ್ಯಧೀಶರಾಗುತ್ತಾ, ಬಡವರು ಮತ್ತೂ ಬಡವರಾಗುವಂತಹ ದಾರಿಯನ್ನು ಹಿಡಿದಿಲ್ಲ. ಸಂಪತ್ತಿನ ತಿಳುವಳಿಕೆ ಹಾಗೂ ಅದರ ಸಮಾನ ಹಂಚಿಕೆ ಆಗಬೇಕೆಂಬುದೇ ನಮ್ಮ ಈ ಪಾತ್ರ ನಿರ್ವಹಣೆಯ ಆಶಯವಾಗಿದೆ.

**ನಮ್ಮ ಪ್ರಯತ್ನ:** ಉಳಿದಿರುವ 33 ಭಾರತೀಯ ಗೋತಳಿಗಳ ಸಂರಕ್ಷಣೆ, ಸಂವರ್ಧನೆಯ ಕಾರ್ಯವನ್ನು ಪರಿಣಾಮಕಾರಿಯಾಗಿ, ತುರ್ತಾಗಿ ಕೈಗೊಳ್ಳುವುದು. ಒತ್ತುವರಿಯಾದ ಗೋಮಾಳಗಳನ್ನೂ ಬಿಡಿಸಿಕೊಂಡು, ಗೋಮಾಳಗಳು ಸಾರ್ಥಕವಾಗುವಂತೆ ಮಾಡುವುದು.

ಯಾತ್ರೆಯ ಉದ್ದೇಶ – ನೇರ, ಸಾರ್ವಕಾಲಿಕ; ನಮ್ಮ ನಾಡಿನ ಹಿತದೃಷ್ಟಿಯಿಂದ ಅನಿವಾರ್ಯವೆಂಬ ಸಂಗತಿಯನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಡುವುದು ಹಾಗೂ ನಂತರದ ಹೆಜ್ಜೆಗಳಿಗೆ ಪ್ರಯತ್ನಿಸುವುದು.

ನಿಜವಾಗಿ ಗೋ ಸಂರಕ್ಷಣೆ ಎಂಬುವುದು ಆಗುವುದಿದ್ದರೆ ಅದು ರೈತನ ಮನೆಯಿಂದ ಮಾತ್ರ. ಆದ್ದರಿಂದ ಗೋ ಆಧಾರಿತ ಜೀವನ, ಕೃಷಿ ದೀರ್ಘಕಾಲದಲ್ಲಿ ಬಹಳ ಪ್ರಯೋಜನಕಾರಿ ಎಂಬುದನ್ನು ರೈತನಿಗೆ ಮನವರಿಕೆ ಮಾಡಿಕೊಡುವುದು. ಸದ್ಯದ ಪರಿಸ್ಥಿತಿಯಲ್ಲಿ ಅದಕ್ಕಿಂತಲೂ ಮುಖ್ಯವಾಗಿ ಗೋಪಾಲನೆಯನ್ನು ಲಾಭದಾಯಕವಾಗಿಸಲೇಬೇಕು. ಅದಕ್ಕಾಗಿ ಗವ್ಯೋದ್ಯಮವನ್ನು ಚುರುಕುಗೊಳಿಸುವುದು.

ಗವ್ಯೋತ್ಪನ್ನಗಳ ಹೊಸಹೊಸ ಸಾಧ್ಯತೆಗಳಿಗಾಗಿ ತೀವ್ರತರ ಸಂಶೋಧನೆಗಳನ್ನು ಪ್ರಾರಂಭಿಸುವುದು.

ಅಭಯಧಾಮ, ಅಭಯ ತಹಸೀಲ್, ಅಭಯ ಜಿಲ್ಲೆಗಳನ್ನು ರೂಪಿಸಲು ತಳಮಟ್ಟದ ಕಾರ್ಯವನ್ನು ಆರಂಭಿಸುವುದು.

# ಹೀಗೊಂದು ಹಾಲಿನ ಸ್ವಗತ–2

ನಮಸ್ಕಾರ. ನನ್ನ ನೆನಪಿದೆಯಲ್ಲ ನಿಮಗೆ ಅತ್ಯಂತ ಸುಲಭವಾಗಿ ಸಿಗುವ ಅತ್ಯುತ್ತಮ ಪೌಷ್ಟಿಕ ಆಹಾರಗಳಲ್ಲಿ ಒಂದಾದ ನಾನು ಕಳೆದ ಬಾರಿ ನನ್ನ ಬಗೆಗೆ ಒಂದಿಷ್ಟು ಹೇಳಿದ್ದೆ. ಹೇಳಬೇಕಾದ್ದು ಇನ್ನೂ ಇದೆ. ಈ ಬಾರಿ ನನ್ನ ಉಪಉತ್ಪನ್ನಗಳ ಉಪಯೋಗಗಳ ಬಗೆಗೆ ಸ್ವಲ್ಪ ಕೇಳುವಂತವರಾಗಿ.

ಮೊಸರು: ಇದು ಹಸಿವನ್ನು ಹೆಚ್ಚಿಸುವ ಗುಣ ಹೊಂದಿದೆ. ಹೃದಯಕ್ಕೆ ಒಳ್ಳೆಯದು. ವಾತನಾಶಕ ಹಾಗೂ ಭೇದಿ ನಿಲ್ಲಿಸುವ ಗುಣವನ್ನು ಹೊಂದಿದೆ. ಇನ್ನೊಂದು ಗಮನಿಸಬೇಕಾದ ಅಂಶವೇನೆಂದರೆ ಬೇರೆಲ್ಲ ಪ್ರಾಣಿಗಳ ಹಾಲಿನಿಂದ ತಯಾರಿಸುವ ಮೊಸರಿಗಿಂತಲೂ ಆಕಳ ಮೊಸರೇ ಸರ್ವಶ್ರೇಷ್ಠ!

ಮಜ್ಜಿಗೆ: ರುಚಿಕರವಾದ ಮಜ್ಜಿಗೆ ತ್ರಿದೋಷನಿವಾರಕ, ಮೇದಾಜನಕ ಹಾಗೂ ಉದರರೋಗ ನಾಶಕ ಮತ್ತು ಬುದ್ಧಿಶಕ್ತಿವರ್ಧಕ. ವಾತದೋಷ ಹಾಗೂ ಉದರರೋಗಗಳಿಗೆ ಹುಳಿ ಮಜ್ಜಿಗೆಯಲ್ಲಿ ಸೈಂಧವ ಲವಣವನ್ನು ಬೆರೆಸಿ ಕುಡಿಯುವುದರಿಂದ ಪರಿಹಾರ ಲಭ್ಯ.

ಬೆಣ್ಣೆ: ಜೀರ್ಣಕ್ಕೆ ಸುಲಭವಾದ ಬೆಣ್ಣೆಯು, ಬಲಕಾರಕ ಹಾಗೂ ಸಣ್ಣ ಮಕ್ಕಳಿಂದ ಹಿಡಿದು ವೃದ್ಧರವರೆಗೆ ಎಲ್ಲರಿಗೂ ಬಹಳ ಒಳ್ಳೆಯದು.

ತುಪ್ಪ: ಆಕಳ ತುಪ್ಪ ಕಣ್ಣಿನ ಆರೋಗ್ಯಕ್ಕೆ ಒಳ್ಳೆಯದು. ಇದು ಸಪ್ತಧಾತು ವರ್ಧಕ. ವಿಷನಾಶಕ ಹಾಗೂ ರುಚಿಕರ. ಪ್ರತಿ ೧೦೦ಗ್ರಾಂ ತುಪ್ಪದಲ್ಲಿ ೧೧೧೪ ಮೈಕ್ರೋಗ್ರಾಮ್‌ನಷ್ಟು ವಿಟಮಿನ್ ಎ ಅಂಶ ಇರುತ್ತದೆ.

ಕೆನೆ ತೆಗೆದ ಹಾಲು (Skimmed Milk): ಕೆನೆತೆಗೆದ ಹಾಲಿನಲ್ಲಿ ಕೊಬ್ಬಿನ ಅಂಶ ಕಡಿಮೆಯಾದರೂ ಪ್ರೋಟೀನ್, ಶರ್ಕರ, ಖನಿಜಾಂಶ ಹಾಗೂ ವಿಟಮಿನ್ ಬಿ ಅಂಶಗಳು ಹೇರಳವಾಗಿವೆ. ಕೆನೆತೆಗೆದ ಹಾಲಿಗೆ ವಿಟಮಿನ್ ಎ, ಡಿ ಹಾಗೂ ಪೈರಿಡೋಕ್ಸಿನ್ ಸೇರಿಸಿದರೆ ಅದೊಂದು ಅತಿ ಕಡಿಮೆ ಬೆಲೆಯ ಅತ್ಯುಚ್ಚ ಪೌಷ್ಟಿಕ ಆಹಾರವಾಗುತ್ತದೆ. ಅಪೌಷ್ಟಿಕತೆಯಿಂದಾಗಿ ಬರುವ ರೋಗಗಳು, ಮೂತ್ರಪಿಂಡದ ರೋಗಗಳು ಹಾಗೂ ಯಕೃತ್‌ನ ಸಿರೋಸಿಸ್‌ಗಳ ಚಿಕಿತ್ಸೆಯಲ್ಲಿ ಇದು ಬಹಳ ಉಪಯೋಗಕ್ಕೆ ಬರುತ್ತದೆ. ಚಪಾತಿ, ಮೊಸರು ಇತ್ಯಾದಿಗಳನ್ನು ತಯಾರಿಸುವಾಗ ಆರು ಚಮಚೆಯಷ್ಟು ಕೆನೆತೆಗೆದ ಹಾಲಿನ ಹುಡಿಯನ್ನು ಸೇರಿಸುವುದರಿಂದ ಸುಮಾರು ೩೫ಗ್ರಾಂನಷ್ಟು ಅಧಿಕ ಪ್ರೋಟೀನ್ ಪೂರೈಕೆಯಾಗುತ್ತದೆ.

ಕೋವಾ: ಹಾಲಿನಲ್ಲಿರುವ ನೀರಿನಂಶವನ್ನು ಸುಮಾರು ೨೦%ರಿಂದ ೨೫%ಕ್ಕಿಳಿಸಿದಾಗ ಇದು ಸಿಗುತ್ತದೆ. ಹಾಲನ್ನು ಉಕ್ಕದಂತೆ ಹಾಗೂ ತಳಹಿಡಿಯದಂತೆ ಕದಡಿಸುತ್ತಾ ಚೆನ್ನಾಗಿ ಕುದಿಸಲಾಗುತ್ತದೆ. ಅಷ್ಟಾಗಿ ತಣಿಸಿದ ಮೇಲೆ ಕೊಬ್ಬು, ಪ್ರೋಟೀನ್ ಮತ್ತು ಲ್ಯಾಕ್ಟೋಸ್‌ಗಳನ್ನೊಳಗೊಂಡ ಕೋವಾ ತಯಾರಾಗಿರುತ್ತದೆ. ಒಂದು ಚಮಚೆ ಕೋವಾ ಸುಮಾರು ೮೨ಕಿಲೋ ಕ್ಯಾಲರಿಯನ್ನು ಪೂರೈಸುತ್ತದೆ.

ಪನೀರ್: ಕುದಿಯುತ್ತಿರುವ ಹಾಲಿಗೆ ಲಿಂಬೆರಸವನ್ನು ಸೇರಿಸುವ ಮೂಲಕ, ಇದನ್ನು ತಯಾರಿಸಲಾಗುತ್ತದೆ. ಇದು ಕೆಸಿನ್, ಲ್ಯಾಕ್ಟಾಲ್ಬಮಿನ್ ಹಾಗೂ ಕೊಬ್ಬಿನ ಪ್ರಕ್ಷೇಪವಾಗಿರುತ್ತದೆ. ಇದರಲ್ಲಿನ ನೀರಿನಂಶವನ್ನು ಪೂರ್ತಿ ತೆಗೆಯಲಾಗಿರುತ್ತದೆ. ಹೀಗೆ ತೆಗೆಯಲಾದ ಆ ನೀರಿನಂಶ ಕೂಡ ಉತ್ತಮ ಪೋಷಕಾಂಶಯುಕ್ತವೇ ಆಗಿರುತ್ತದೆ. ಕೆಲವು ಕಡೆಗಳಲ್ಲಿ ಅದನ್ನೂ ಉಪಯೋಗಿಸಲಾಗುತ್ತದೆ.

– ಅನುಶ್ರೀ ಎಲ್.

# ಅಂದದಾಕಳ ಕಂದ ಕರುಗಳ ಮಂದೆ ಮಂದೆಯಲಿ...

ಹಳ್ಳಿ ಪರಿಸರದಲ್ಲಿ ಕೃಷಿಕ ಕುಟುಂಬದಲ್ಲಿ ಹುಟ್ಟಿ ಬೆಳೆದವ ನಾನು. ನಮ್ಮ ಮನೆಗೆ ಕೆಲಸಕ್ಕೆ ಬರುತ್ತಿದ್ದ ಆಳುಗಳಲ್ಲಿ ಒಬ್ಬನ ಹೆಸರು ಸುಂದರ. ಹೆಸರಿಗಷ್ಟೇ ಅಲ್ಲ, ನೋಡುವುದಕ್ಕೂ ಸುಂದರ. ಅಡಿಕೆತೋಟದ ಕೆಲಸವಿರಲಿ, ತೆಂಗಿನಕಾಯಿ ಕೀಳುವುದಿರಲಿ, ದನಗಳ ಕೊಟ್ಟಿಗೆಯ ಕೆಲಸವಿರಲಿ ಅವನು ಅದನ್ನು ಅಚ್ಚುಕಟ್ಟಾಗಿ ಮಾಡುವ ರೀತಿಯೂ ಸುಂದರ. ಆದರೆ ಅದೆಲ್ಲಕ್ಕಿಂತ ಬೇರೆಯೇ ಕಾರಣಕ್ಕೆ ನನಗವನು ಇಷ್ಟವಾಗುತ್ತಿದ್ದ. ದಿನಾಬೆಳಿಗ್ಗೆ ನಮ್ಮ ಹಟ್ಟಿಯ ದನಕರುಗಳನ್ನು ಕಾಡಿಗೆ ಮೇಯುವುದಕ್ಕೆ ಬಿಟ್ಟುಬರುವುದು ಸುಂದರನ ಕೆಲಸ. ಅವನ ಜತೆ ಹೋಗಲಿಕ್ಕೆ ನನಗೆ ಎಲ್ಲಿಲ್ಲದ ಉಮೇಧು! ಆದರೆ ಆ ಕಾಲದಲ್ಲಿ, ತೀರಾ ಅಸ್ಪೃಶ್ಯತೆ ಅಲ್ಲದಿದ್ದರೂ ಸ್ವಲ್ಪಮಟ್ಟಿಗೆ ಮಡಿ–ಮೈಲಿಗೆ ಅಂತೆಲ್ಲ ಕಟ್ಟಳೆ ಇರುತ್ತಿತ್ತು. ಸುಂದರನ ಜತೆ ನಾನು ಹೋಗಬಹುದಾದರೂ, ಅವನು ನನ್ನನ್ನು ಹೆಗಲಮೇಲೆ ಎತ್ತಿಕೊಳ್ಳಬಹುದಾದರೂ, ಆಮೇಲೆ ಮನೆಯೊಳಗೆ ಬರಬೇಕಿದ್ದರೆ ನಾನು ಬಟ್ಟೆಬದಲಿಸಬೇಕಿತ್ತು. ಅದಕ್ಕಾಗಿ ಏನು ಉಪಾಯವೆಂದರೆ ನನ್ನ ಒಂದುಜತೆ ಬಟ್ಟೆ ಸುಂದರನ ತಾಬೆಯಲ್ಲೇ ಇರುತ್ತಿತ್ತು. ಅವನು ಬೆಳಿಗ್ಗೆ ಹಟ್ಟಿಗೆ ಬಂದು ದನಕರುಗಳನ್ನು ಬಿಡಿಸತೊಡಗುತ್ತಲೇ ನಾನು ಅಂಗಿಚಡ್ಡಿ ತೆಗೆದು ಬರ್ತ್‌ಸೂಟ್‌ನಲ್ಲಿ ಅವನತ್ತ ಓಡುತ್ತಿದ್ದೆ, ಅವನಲ್ಲಿದ್ದ ಅಂಗಿಚಡ್ಡಿ ಹಾಕ್ಕೊಂಡು ದನಕರುಗಳೊಂದಿಗೆ ನಮ್ಮಿಬ್ಬರ ಸವಾರಿ ಕಾಡಿಗೆ. ಸುಮಾರು ಹತ್ತಿಪ್ಪತ್ತು ನಿಮಿಷಗಳ ದಾರಿ ಅಷ್ಟೇ. ದನಕರುಗಳನ್ನು ಮೇಯಲುಬಿಟ್ಟು ಹಿಂದಿರುಗುತ್ತ ಮುಳ್ಳುಹಣ್ಣು ರೆಂಜೆಹಣ್ಣು ಕೇಪಳ ಮೊದಲಾದ ಹಣ್ಣುಹಂಪಲು ಬೇಟೆ ಮುಗಿಸಿ ಮನೆಗೆ ವಾಪಸ್. ಮತ್ತೆ ಆ ಅಂಗಿಚಡ್ಡಿ ತೆಗೆದಿಟ್ಟು ಓಡಿಬಂದು ಮೊದಲಿದ್ದ ಬಟ್ಟೆ ಹಾಕಿಕೊಳ್ಳುವುದು. ಜಗ್‌ಜಿತ್‌ಸಿಂಗ್‌ಗೆ ಹೇಳಿದರೆ "ಮಗರ್ ಮುಝ್‌ಕೋ ಲೌಟಾದೋ ಬಚ್‌ಪನ್ ಕಾ ಸಾವನ್..." ಎನ್ನುತ್ತ ಗಝಲ್‌ನಲ್ಲಿ ಇದನ್ನೂ ಸೇರಿಸಿ ಹಾಡುತ್ತಿದ್ದರೊ ಏನೊ.

ಮೊನ್ನೆ ಟಿವಿಯಲ್ಲಿ ಒಂದು ಡಾಕ್ಯುಮೆಂಟರಿ ಫಿಲಂ ನೋಡಿದೆ. ಇಲ್ಲಿನ ಪಿಬಿಎಸ್ ಚಾನೆಲ್‌ನಲ್ಲಿ ಪ್ರತಿ ಭಾನುವಾರ ಸಂಜೆ ಪ್ರಸಾರವಾಗುವ Nature ಸರಣಿಯಲ್ಲಿ ಮೂಡಿಬಂದ Holy Cow ಎಂಬ ಸಾಕ್ಷ್ಯಚಿತ್ರ. ಎಂಥ ಸೊಗಸಾದ ಕಾರ್ಯಕ್ರಮ!

ಅನಾದಿಕಾಲದಿಂದಲೂ ಮನುಷ್ಯ ಮತ್ತು ಹಸು ಒಟ್ಟೊಟ್ಟಿಗೇ ಬಾಳ್ವೆ ನಡೆಸಿಕೊಂಡುಬಂದಿವೆ ಎನಿಸುವಷ್ಟು ಅವಿನಾಭಾವ ಸಂಬಂಧವಿದೆಯಲ್ಲ, ಅದುಹೇಗೆ ಹುಟ್ಟಿಕೊಂಡಿತು? ಈ ಪ್ರಶ್ನೆಯೊಂದಿಗೆ ಸಾಕ್ಷ್ಯಚಿತ್ರ ಆರಂಭವಾಗುತ್ತದೆ. ದನ ಎಂದು ಗುರುತಿಸಲ್ಪಡುವ ಪ್ರಾಣಿಪ್ರಭೇದಕ್ಕೆ ಸುಮಾರು 30 ಸಾವಿರ ವರ್ಷಗಳ ಇತಿಹಾಸವಿದೆಯಂತೆ, ಮೊದಲು ಅದು ಒರಾಕ್ ಎನ್ನುವ ವನ್ಯಮೃಗವಾಗಿತ್ತಂತೆ, ಎಂಟುಸಾವಿರ ವರ್ಷಗಳಿಂದೀಚೆಯಷ್ಟೇ ಪಳಗಿದ ಪ್ರಾಣಿಯಾಗಿ ಮನುಷ್ಯನೊಟ್ಟಿಗೆ ಬದುಕಲು ಆರಂಭಿಸಿತು. ಹೆಚ್ಚೂಕಡಿಮೆ ಅದೇ ಕಾಲಘಟ್ಟ, ಮನುಷ್ಯನೂ ಕಾಡಿನ ಗುಹೆಗಳಿಂದ ಹೊರಬಂದು ನದೀತಟಗಳಲ್ಲಿ ನಾಗರಿಕತೆಯನ್ನು ಬೆಳೆಸತೊಡಗಿದ. ಮೆಸಪೊಟೊಮಿಯಾ, ಸಿಂಧೂನದಿ ಮತ್ತು ಆಫ್ರಿಕಾದ ಕೆಲ ಭಾಗಗಳು– ಪಶುಪಾಲನೆ ಶುರುವಾದದ್ದೂ ಅಲ್ಲಿಯೇ. ಮನುಷ್ಯ ಹಸುವನ್ನು ಪಳಗಿಸಿದನೋ ಅಥವಾ ಹಸು ಮನುಷ್ಯನನ್ನು 'ಬೇಟೆಗಾರನಿಂದ ಬೇಸಾಯಗಾರ'ನನ್ನಾಗಿಸಿತೋ ಹೇಳಲಾಗದು. ಒಂದುವೇಳೆ ಮನುಷ್ಯನೇ ಹಸುವನ್ನು ಪಳಗಿಸಿದ್ದೆಂದು ಒಪ್ಪಿಕೊಂಡರೂ ಹಸುವೇ ಏಕೆ, ಕಾಡಿನಲ್ಲಿ ಬೇರೆ ಪ್ರಾಣಿಗಳೂ ಅದೆಷ್ಟೋ ಇದ್ದು ಆಯ್ಕೆ ವಿಪುಲವಾಗಿತ್ತಲ್ಲ? ಆದಿಮಾನವ ಅಲ್ಲೂ ಬಹಳಷ್ಟು ಚಾಣಾಕ್ಷತನ ಉಪಯೋಗಿಸಿದ್ದ! ತಾನು ಸಾಕಲಿರುವ ಪ್ರಾಣಿ ಹೇಗಿರಬೇಕೆಂದರೆ– ಗುಂಪು ಕಟ್ಟಿ ವಲಸೆ ಹೋಗಬಾರದು; ಬಂಧನದಲ್ಲಿದ್ದಾಗಲೂ ಸಂತಾನೋತ್ಪತ್ತಿ ಮಾಡಬಲ್ಲದಾಗಬೇಕು; ತುಂಬ ನಿಧಾನವಾಗಿ ಅಥವಾ ಅಸಹಜ ಗಾತ್ರದಲ್ಲಿ ಬೆಳೆಯಬಾರದು; ಆಹಾರಕ್ಕಾಗಿ ನಿರ್ದಿಷ್ಟ ಹವಾಮಾನ ತಾಪಮಾನಗಳನ್ನು ಅವಲಂಬಿಸಬಾರದು; ಕ್ರೂರ ಸ್ವಭಾವದ್ದಾಗಿರಬಾರದು. ಈ ಐದೂ ಪರೀಕ್ಷೆಗಳಲ್ಲಿ ಉತ್ತೀರ್ಣವಾದದ್ದು ಹಸು. ಬಹುಶಃ ಹಸು ಮಾತ್ರ! ಅಲ್ಲಿಂದ ಶುರುವಾಯ್ತು ಜನ–ದನ ಸಹಜೀವನ.

ಡಾಕ್ಯುಮೆಂಟರಿಯಲ್ಲಿ ಮಾರ್ಕ್ ಇವಾನ್ಸ್ ಎನ್ನುವ ಒಬ್ಬ ಬ್ರಿಟಿಷ್ ಗೌಳಿಗ ಮತ್ತು ಇನ್ನೂರೈವತ್ತಕ್ಕೂ ಹೆಚ್ಚು ದನಗಳಿರುವ ಅವನ ಅತ್ಯಾಧುನಿಕ ದೊಡ್ಡಿಯನ್ನು ತೋರಿಸುತ್ತಾರೆ. ಆ ದನಕರುಗಳು ಮತ್ತು ಅವುಗಳ ಆರೈಕೆಯೇ ಮಾರ್ಕ್‌ನ ಸರ್ವಸ್ವ. ಅವುಗಳಿಗಾದರೂ ಅಷ್ಟೇ– ಮಾರ್ಕ್ ಅಂದರೆ ಮೆಡಿಕ್, ಮಿಡ್‌ವೈಫ್, ಮ್ಯಾಚ್‌ಮೇಕರ್... ಎಲ್ಲವೂ! ತನ್ನ ದೊಡ್ಡಿಯ ಎಲ್ಲ ದನಕರುಗಳನ್ನು ಹೆಸರು ಹಿಡಿದು ಕರೆಯುತ್ತಾನೆ. ಕರುವಿನ ಹೆಸರು, ಅದರ ಅಮ್ಮನ ಹೆಸರು, ಅಜ್ಜಿಯ ಹೆಸರು... ಇಡೀ ವಂಶವೃಕ್ಷವೇ ಮಾರ್ಕ್ ಮಸ್ತಿಷ್ಕದಲ್ಲಿ. ಬಹುಶಃ ಅವನ ಅಪ್ಪನೋ ಅಜ್ಜನೋ ಒಂದು ಹಸು ಸಾಕಿದ್ದಿರಬಹುದು, ಅದರ ತಲೆಮಾರುಗಳೇ ಈಗವನ ಆಸ್ತಿ. ಸ್ವಾರಸ್ಯವೆಂದರೆ ಮಾರ್ಕ್ ಬಳಿ ಆರೀತಿ ತಲೆತಲಾಂತರಗಳ ಹಸುಕರುಗಳಿರುವುದನ್ನು ನೋಡಿ ನನಗೆ ನಮ್ಮನೆಯ ಹಟ್ಟಿಯಲ್ಲೂ ಅಷ್ಟೊಂದು ಸಂಖ್ಯೆಯಲ್ಲಲ್ಲದಿದ್ದರೂ ಹಾಗೆಯೇ ತಲೆಮಾರುಗಳ ಹಸುಕರುಗಳಿದ್ದುದು ನೆನಪಾಯ್ತು. ಪ್ರೇಮಾ, ಶಾಂತಾ, ಕಾಳಿ, ಕಪಿಲಾ... ಹೀಗೆ ನಾಲ್ಕು ತಲೆಮಾರಿನ ಹಸುಗಳ, ನಮ್ಮ ಮನೆಮಂದಿಗೆ ಕ್ಷೀರಧಾರೆಯೊದಗಿಸಿದ ಕಾಮಧೇನುಗಳ ಚಿತ್ರಣ ಒಮ್ಮೆ ನನ್ನ ಕಣ್ಮುಂದೆ ಬಂತು. ಬಹುಶಃ ಅಂಥದೊಂದು ಪರ್ಸನಲ್ ರೆಲವೆನ್ಸ್‌ನಿಂದಾಗಿಯೇ ಮಾರ್ಕ್ ಮತ್ತು ಅವನ ದನಕರುಗಳು ನನ್ನ ಮನಸ್ಸಲ್ಲೊಂದು ಮಧುರಯಾತನೆಯ ಮಾರ್ಕ್ ಒತ್ತಿಬಿಟ್ಟವು.

ಮುಂದಿನ ಲೊಕೇಶನ್ ಆಫ್ರಿಕಾದ ಬುಡಕಟ್ಟು ಜನಾಂಗ 'ಮಸಾಯಿ'ಗಳು ತಮ್ಮ ದನಕರುಗಳೊಂದಿಗೆ ಜೀವಿಸುವ ಬೆಟ್ಟಗುಡ್ಡಗಳು. ಮಸಾಯಿಗಳೂ ಬಹಳ ಮಮತೆಯಿಂದ ದನಗಳನ್ನು ಸಾಕುತ್ತಾರೆ, ಮುಖ್ಯವಾಗಿ ಹೈನುಗಾರಿಕೆಗೆ; ಅಪರೂಪಕ್ಕೊಮ್ಮೆ ಹಬ್ಬದಾಚರಣೆಯ ಸಂದರ್ಭದಲ್ಲಿ ಮಾತ್ರ ಮಾಂಸಭಕ್ಷಣಕ್ಕೆ. ಮಸಾಯಿಗಳ ಶ್ರೀಮಂತಿಕೆ ನಿರ್ಧಾರವಾಗುವುದೇ ಸಾಕಿರುವ ದನಕರುಗಳ ಸಂಖ್ಯೆಯಿಂದ. ಎಲ್ಲಿಯವರೆಗೆಂದರೆ, ಹೆಚ್ಚು ದನಗಳಿರುವ ಯುವಕನಿಗಷ್ಟೇ ಮದುವೆಯಾಗುವ ಯೋಗವಂತೆ! ಆದರೆ ವಿಚಿತ್ರ ಅನಿಸಿದ್ದೆಂದರೆ ಮಸಾಯಿಗಳು

ಗೋರಕ್ತ ಕುಡಿಯುವ ಕ್ರಮ. ದನಕ್ಕೆ ಹತ್ತಿರದಿಂದ ಬಾಣ ಹೊಡೆದು (ಕೊಲ್ಲಲಿಕ್ಕಲ್ಲ) ಆಗ ಚಿಮ್ಮುವ ರಕ್ತ ಸಂಗ್ರಹಿಸಿ ಕುಡಿಯುತ್ತಾರೆ! ಹೀಗೆ ನಿಯಮಿತವಾಗಿ ಮಾಡುತ್ತಿದ್ದರೆ ದನಕ್ಕೂ ಒಳ್ಳೆಯದಂತೆ, ರಕ್ತ ಕುಡಿದವರಿಗೂ ಒಳ್ಳೆಯದಂತೆ. ಅದು ಮಸಾಯಿಗಳ ನಂಬಿಕೆ. ಎಂಟು ಸಾವಿರ ವರ್ಷಗಳ ಹಿಂದೆ, ಜನ–ದನ ಸಹಬಾಳ್ವೆ ಆರಂಭದ ದಿನಗಳಲ್ಲಿ ಬಹುಶಃ ಆ ರೀತಿ ಇತ್ತೋ ಏನೊ. ಮಸಾಯಿಗಳು ಇವತ್ತಿಗೂ ಅದನ್ನೇ ಮುಂದುವರೆಸಿಕೊಂಡು ಬಂದಿರುವಂತಿದೆ.

ಅದಾದ ಮೇಲೆ ಹೋಲಿ ಕೌ ಸಾಕ್ಷ್ಯಚಿತ್ರ ನಮ್ಮ ಭಾರತವನ್ನು ಪ್ರವೇಶಿಸುತ್ತದೆ. ನಮ್ಮ ದೇಶದಲ್ಲಿ ಹಸುವಿಗಿರುವ **'ಹೋಲಿ'** ಗೌರವವನ್ನು ಬಣ್ಣಿಸುತ್ತದೆ. ಆಧುನಿಕ ಯುಗದಲ್ಲೂ ಪ್ರಾಚೀನ ಸಂಪ್ರದಾಯಗಳ ಆಚರಣೆ ಹೇಗೆ ಉಳಿದುಕೊಂಡಿದೆ ಎನ್ನುವುದಕ್ಕೆ, ಹೊಸ ಮನೆಯ ಗೃಹಪ್ರವೇಶಕ್ಕೆ ಮುನ್ನ ಹಸುವನ್ನು ಮನೆಯೊಳಗೆ ಕರಕೊಂಡು ಬಂದು ಪೂಜೆ ಮಾಡುವ ದೃಶ್ಯವನ್ನು ತೋರಿಸುತ್ತದೆ. ಮಟ್ಟುಪೊಂಗಲ್ ಹಬ್ಬದಲ್ಲಿ ದನಕರುಗಳ ಪೂಜೆ, ಆಟೋಟಗಳ ಸಡಗರ ಮೇಳೈಸುತ್ತದೆ. ಅದಕ್ಕಿಂತ ಹೆಚ್ಚಾಗಿ ಮನ ಮುಟ್ಟುವುದು ಡಾ. ಸಾಧನಾ ರಾವ್ ಎಂಬೊಬ್ಬ ಮಹಿಳೆಯ ಗೋಶಾಲೆಯ ದೃಶ್ಯ. ಆಕೆಯನ್ನು ಗೋ–ಲೋಕದ ಮದರ್ ತೆರೇಸಾ ಎಂದೇ ಬಣ್ಣಿಸಿದ್ದಾರೆ. ಕುಂಟ, ಕುರುಡ, ಅನಾಥ ದನಕರುಗಳನ್ನು ತನ್ನ ಮಕ್ಕಳೆಂಬಂತೆ ಪ್ರೀತಿಯಿಂದ ಪೋಷಿಸುತ್ತಿರುವ, ಅದಕ್ಕಾಗಿಯೇ ತನ್ನ ಜೀವನವನ್ನು ಮುಡಿಪಾಗಿಟ್ಟಿರುವ ಡಾ. ಸಾಧನಾ ರಾವ್ ಸಾಧನೆ ತುಂಬ ಹೆಮ್ಮೆಯೆನಿಸುತ್ತದೆ. ಆಶ್ಚರ್ಯವೆಂದರೆ ಅವರ ಬಗ್ಗೆ ಬೇರೆಲ್ಲೂ ಪ್ರಚಾರವಾದಂತಿಲ್ಲ. ಗೂಗಲ್‌ನಲ್ಲಿ ಹುಡುಕಿದರೆ ಒಂದೇ ಒಂದು ಪುಟವೂ ಸಿಗಲಿಲ್ಲ. ಮೂಕಪ್ರಾಣಿಗಳಿಗೆ ಮಮತೆ ತೋರಿ ಸಿಗುವ ತೃಪ್ತಿಯ ಮುಂದೆ ಕೀರ್ತಿ–ಪ್ರಚಾರಗಳೇನು ಮಹಾ? ಸಾಕ್ಷ್ಯಚಿತ್ರದಲ್ಲಿ ನನ್ನ ಮನಸ್ಸಿನೊಳಗೆ ಮತ್ತೊಂದು ಮುದ್ರೆಯೊತ್ತಿದ್ದು ಈ ಸಾಧನಾ ರಾವ್ ಸಾಹಸಗಾಥೆ.

ಮತ್ತೆ ಯುರೋಪ್‌ನತ್ತ ಹೊರಳುವ ಡಾಕ್ಯುಮೆಂಟರಿ ಅಲ್ಲಿ ಹಸುಗಳ ವಿವಿಧ ತಳಿಗಳ ಬೆಳವಣಿಗೆ, ಜಾನುವಾರುಜಾತ್ರೆ, ಪಂದ್ಯ–ಪ್ರದರ್ಶನಗಳನ್ನೆಲ್ಲ ತೋರಿಸುತ್ತದೆ. ಆಮೇಲೆ ಅಮೆರಿಕದ **'ಡೈರಿ ಕ್ಯಾಪಿಟಲ್'** ವಿಸ್ಕಾನ್ಸಿನ್ ಸಂಸ್ಥಾನದ ಡೈರಿ ಉದ್ಯಮದ ಮೇಲೂ ದೃಷ್ಟಿಹಾಯಿಸುತ್ತದೆ. ಪ್ರಪಂಚದಲ್ಲೇ ಅತಿಹೆಚ್ಚು ಪ್ರಮಾಣದ ಗೋಮಾಂಸ ಉತ್ಪಾದನೆ ಮತ್ತು ಉಪಭೋಗ ಅಮೆರಿಕದಲ್ಲೇ ಆಗುತ್ತದೆಂದು ತಿಳಿಸುತ್ತದೆ. **'ಫಾಸ್ಟ್‌ಫುಡ್ ನೇಷನ್'** ಪುಸ್ತಕದ ಲೇಖಕ ಎರಿಕ್ ಶ್ಲಾಸ್ಸರ್ ಮಾತನಾಡುತ್ತಾನೆ. ಕೃಷಿ ಮತ್ತು ಪಶುಸಂಗೋಪನೆಯಲ್ಲಿ ಕಳೆದ ಐವತ್ತು ವರ್ಷಗಳಲ್ಲಾದ ಕ್ರಾಂತಿ ಅಮೆರಿಕವನ್ನು/ಅಮೆರಿಕನ್ನರನ್ನು ಎಲ್ಲಿಗೆ ತಂದು ನಿಲ್ಲಿಸಿದೆ ಎಂದು ವಿಷಾದದಿಂದಲೇ ವಿವರಿಸುತ್ತಾನೆ. ಕೊಲ್ಲಲಿಕ್ಕೆಂದೇ ಹಸುಗಳನ್ನು ಸಾಕುವ ಅಮೆರಿಕನ್ ವ್ಯವಸ್ಥೆ Feed lots, ಅಲ್ಲಿ ಜೋಳ ತಿನ್ನಿಸಿ ದನಗಳನ್ನು ಕೊಬ್ಬಿಸುವುದು, ಕಾಯಿಲೆ ಬೀಳದಂತೆ ಅವುಗಳ ಆಹಾರದಲ್ಲಿ ಆ್ಯಂಟಿಬಯಾಟಿಕ್‌ಗಳನ್ನು ಸುರಿಯುವುದು, ಕೊನೆಗೂ ಕಸಾಯಿಖಾನೆಯಲ್ಲಿ ನಿರ್ದಾಕ್ಷಿಣ್ಯವಾಗಿ ಕೊಲ್ಲುವುದು... ಸಾಕ್ಷ್ಯಚಿತ್ರ ಒಂದೊಮ್ಮೆ ವಿಷಾದದ ಛಾಯೆಯಲ್ಲಿ ಮಸುಕಾಗುತ್ತದೆ.

ಆದರೆ ಕೊನೆಯಲ್ಲೊಂದು ಹೃದಯಕ್ಕೆ ತಂಪೆರೆಯುವ, ಆರ್ದ್ರತೆಯ ಸಿಂಚನಗೈಯುವ ವಿವರಣೆ. ನ್ಯೂಯಾರ್ಕ್‌ನಲ್ಲಿ ಸಪ್ಟೆಂಬರ್ 11ರ ದುರ್ಘಟನೆ ನಡೆದಾಗ ಆ ವಾರ್ತೆ ಅದುಹೇಗೋ ಆಫ್ರಿಕಾದ ಮಸಾಯಿಗಳನ್ನೂ ತಲುಪಿತ್ತಂತೆ. ಎತ್ತರದ ಕಟ್ಟಡಕ್ಕೆ ವಿಮಾನ ಹೇಗೆ ಅಪ್ಪಳಿಸಿರಬಹುದೆಂದು ಮಸಾಯಿ ಮುಖಂಡ ತನ್ನ ಬಳಗದವರಿಗೆ ವಿವರಿಸುತ್ತಾನೆ. ಮೈಯೆಲ್ಲ ಕಿವಿಯಾಗಿಸಿ ಕೇಳುತ್ತಿದ್ದವರಲ್ಲಿ ದುಃಖ ಮಡುಗಟ್ಟುತ್ತದೆ. ಮಸಾಯಿಗಳ ಪಂಗಡ ಒಮ್ಮತದಿಂದ ನಿರ್ಧರಿಸುತ್ತದೆ– ತಮ್ಮಲ್ಲಿರುವ ದನಕರುಗಳನ್ನು ನ್ಯೂಯಾರ್ಕ್ ನಗರಕ್ಕೆ ದಾನವಾಗಿ ಕೊಡಬೇಕು. ದನ ಕೊಡುವುದೆಂದರೆ ಮಸಾಯಿಗಳ ಮಮತೆಯ, ಸ್ನೇಹಬಾಂಧವ್ಯದ ಮಹೋನ್ನತ ದ್ಯೋತಕ. **"**The cow carried a message of condolence from one tribe to heal another**"** ಎಂಬ ನಿರೂಪಕನ ಮಾತಂತೂ ಕಣ್ಣುಗಳನ್ನು ಮಂಜಾಗಿಸುತ್ತದೆ. ವ್ಹಾ! ಪುಣ್ಯಕೋಟಿ! ಮನುಷ್ಯನಿಗೆ ಮನುಷ್ಯನೇ ಮಾರಕನಾಗಿರುವ ಇಂದಿನ ದಿನದಲ್ಲೂ ಮನುಕುಲದ ಬಂಧವನ್ನು ಬಿಗಿಯಾಗಿಸುವುದಕ್ಕೆ ಜೀವತೇಯುವ ನಿನಗೆ ಯಾರು ಸಾಟಿ!

(ಕೃಪೆ: ವಿಜಯ ಕರ್ನಾಟಕ)

**–ಶ್ರೀವತ್ಸ ಜೋಶಿ, ಅಮೆರಿಕ**



## ಸಂಪಾದಕರ ನುಡಿ

ಬೆಂಗಳೂರಿನ ಗಿರಿನಗರದಲ್ಲಿ ಅಕ್ಟೋಬರ್ 27, 2007ರಂದು ಪೇಜಾವರ ಮಠಾಧೀಶ್ವರ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ ಈ **ಗೋ ವಿಶ್ವ** ಇ–ಪತ್ರಿಕೆಯ ಪ್ರಥಮ ಸಂಚಿಕೆಯ ಲೋಕಾರ್ಪಣೆ ಜರುಗಿತು. ನಿಮ್ಮ ಕೈಯಲ್ಲಿರುವುದು 22ನೆಯ ಸಂಚಿಕೆ. ಈ ಪತ್ರಿಕೆ ಅಂತರಜಾಲದಲ್ಲಿ ಮಾತ್ರ ಲಭ್ಯ. ಇದೇ ಸಂಚಿಕೆಯ ಮುಖಪುಟದಲ್ಲಿ ಇದರ ಜಾಲತಾಣದ ವಿಳಾಸವಿದೆ. ಅಲ್ಲಿಗೆ ಭೇಟಿ ನೀಡಿ ಹಿಂದಿನ ಸಂಚಿಕೆಗಳನ್ನು ಓದಬಹುದು. ದಯವಿಟ್ಟು ಈ ಇ–ಪತ್ರಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ನಮಗೆ ತಿಳಿಸಿ. ಈ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನಗಳೂ ಬೇಕು. ದಯವಿಟ್ಟು ನಿಮ್ಮ ಪ್ರತಿಕ್ರಿಯೆ ಮತ್ತು ಲೇಖನಗಳನ್ನು ಕಳುಹಿಸಿ ಕೊಡಿ. ನಮ್ಮ ವಿಳಾಸ – govishva@gmail.com